# ಶ್ರೀಮಾತೆಯವರ ಪುಣ್ಯಸ್ಮೃತಿ

ಮೂಲ ಬಂಗಾಳಿ : **ವೀಣಾಪಾಣಿ ಘೋಷ್** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೧

**ಪೂ**ಜ್ಯರಾದ ನನ್ನ ಮಾವನವರು ಶ್ರೀರಾಮಕೃಷ್ಣರ ಪುಣ್ಯ ದರ್ಶನ ಮಾಡಿದ್ದರು. ಶ್ರೀರಾಮಕೃಷ್ಣರು ಕೆಲವು ಮಂದಿ ಭಾಗ್ಯ ವಂತರನ್ನು ತಮ್ಮ ರಸದ್ದಾರರು (ಜವಾಬ್ದಾರಿ ಹೊತ್ತುಕೊಂಡ ವರು) ಎಂದು ಕರೆದಿದ್ದವರಲ್ಲಿ ಒಬ್ಬರಾಗಿದ್ದ 'ಸುರೇಶ್ ಮಿತ್ರ' ಅಥವಾ ಸುರೇನ್‌ಬಾಬು ನನ್ನ ಮಾವನವರ ಆತ್ಮೀಯ ಸ್ನೇಹಿತ ರಾಗಿದ್ದರು. ಆಗ ನನ್ನ ಮಾವ ಕಲ್ಕತ್ತೆಯ ಸಿಮ್ಲಾ ಸ್ಟ್ರೀಟ್‌ನಲ್ಲಿದ್ದ ಸುರೇನ್‌ಬಾಬುಗಳ ಮನೆಯ ಸಮೀಪದಲ್ಲಿ ವಾಸವಾಗಿದ್ದರು. ಒಂದು ದಿನ ಅವರೊಂದಿಗೆಯೇ ದಕ್ಷಿಣೇಶ್ವರಕ್ಕೆ ನನ್ನ ಮಾವ ಹೋಗಿದ್ದರು, ಹಾಗೂ ಶ್ರೀರಾಮಕೃಷ್ಣರ ದರ್ಶನ ಮಾಡಿ, ಪಾದಸ್ಪರ್ಶ ಮಾಡುವ ಸೌಭಾಗ್ಯವನ್ನು ಪಡೆದಿದ್ದರು. ಆ ದಿನ ಗಳಲ್ಲಿ ಸಾಧುಗಳ ದರ್ಶನ ಮಾಡಲು ಹೋದರೆ, ಅವರ ಅಮಾ ನುಷ ವ್ಯಕ್ತಿತ್ವವೇ ಅವರ ಸಾಧುತ್ವದ ಲಕ್ಷಣವೆಂದು ಪರಿಗಣಿಸ ಲಾಗುತ್ತಿತ್ತು; ಭಗವತ್ ತತ್ತ್ವಾನ್ವೇಷಣೆಗಾಗಿ ಅತ್ಯಂತ ಕಡಿಮೆ ಜನರಷ್ಟೇ ಸಾಧುಗಳ ಹತ್ತಿರ ಹೋಗುತ್ತಿದ್ದರು. ನನ್ನ ಮಾವ ಬಹಳ ದೊಡ್ಡ ಇಂಜಿನಿಯರ್ ಆಗಿದ್ದರು. ಶ್ರೀರಾಮಕೃಷ್ಣರ ಬಳಿಗೆ ಹೋಗಿ ಪ್ರಣಾಮ ಮಾಡಿ, ಅವರ ಮುಂದೆ ಕುಳಿತು ಕೊಂಡ ಕೂಡಲೇ ಅವರು ಸಾಮಾನ್ಯವಾಗಿ ಎಲ್ಲರಿಗೂ, ''ನಡು ನಡುವೆ ಬರುತ್ತಿರು'' ಎನ್ನುತ್ತಿದ್ದರು. ನನ್ನ ಮಾವನವರಿಗೂ ಅದೇ ರೀತಿ ಹೇಳಿ, ಬಳಿಕ ಹೀಗೆಂದರು, ''ಓ, ನಿನಗೆ ವರ್ಗವಾಗಿ ಬಿಟ್ಟಿದೆ!'' ಮನೆಗೆ ಮರಳಿ ಬಂದಾಗ ಮಾವ ನೋಡುತ್ತಾರೆ — ಅವರಿಗೆ ಪೂರ್ಣಿಯಾಗೆ ವರ್ಗವಾಗಿರುವುದಾಗಿ ಟೆಲಿಗ್ರಾಂ ಬಂದಿತ್ತು. ಅದರಿಂದ ಅವರಿಗೆ ಅತ್ಯಂತ ಆಶ್ಚರ್ಯವುಂಟಾಗಿತ್ತು. ಕಾರಣ, ಅದನ್ನು ಅವರು ನಿರೀಕ್ಷಿಸಿರಲೇ ಇಲ್ಲ. ಈ ಅಲೌಕಿಕ ಘಟನೆಯು ಅವರ ಹೃದಯವನ್ನು ಸ್ಪರ್ಶಿಸಿತು, ನಿಜ. ಆದರೆ ವರ್ಗವಾಗಿದ್ದರಿಂದ ಪರಸ್ಥಳಕ್ಕೆ ಹೋಗಿ, ಹಲವು ಬಗೆಯ ಸಾಂಸಾರಿಕ ತಾಪತ್ರಯಗಳಲ್ಲಿ ಮುಳುಗಿದ್ದರಿಂದ ಅವರು ಬಹಳ ಕಾಲ ಕಲ್ಕತ್ತೆಯಿಂದ ದೂರ ಇರಬೇಕಾಗಿ ಬಂತು. ಆದಕಾರಣ ಅವರಿಗೆ ಮತ್ತೆ ಶ್ರೀರಾಮಕೃಷ್ಣರನ್ನು ಭೇಟಿಯಾಗುವುದು ಸಾಧ್ಯ ವಾಗಲಿಲ್ಲ. ಅವರು ಕಲ್ಕತ್ತೆಗೆ ಮರಳಿಬಂದಾಗ ಶ್ರೀರಾಮಕೃಷ್ಣರು ತಮ್ಮ ಮಾನವಲೀಲೆಯನ್ನು ಅಂತ್ಯಗೊಳಿಸಿದ್ದರು.

ಬಹಳ ದಿನಗಳು ಕಳೆದವು. ನನ್ನ ಮಾವನ ಮೊದಲನೇ ಮಗ, ಅಂದರೆ ನನ್ನ ಪತಿಯ ಅಣ್ಣ, ಡಾಕ್ಟರ್ ಆಗಿದ್ದರು; ಇಪ್ಪತ್ತೈದನೇ ವಯಸ್ಸಿಗೆ ಅವರು ಎಳೆಯ ಪತ್ನಿ ಹಾಗೂ ಚಿಕ್ಕ ಮಗುವನ್ನು ಬಿಟ್ಟು ಅಕಾಲ ಮೃತ್ಯುವನ್ನಪ್ಪಿದರು. ಅವರ ತಾಯಿ, ತಂದೆಯರು ಶೋಕಸಾಗರದಲ್ಲಿ ಮುಳುಗಿದರು. ಅವರ ಜೀವಕ್ಕೆ ಸಾಂತ್ವನ ನೀಡಲು ಅವರ ಆತ್ಮೀಯರು ತಮ್ಮ ಬಳಿ ಇದ್ದ 'ಶ್ರೀ ರಾಮಕೃಷ್ಣ ಕಥಾಮೃತ' ('ವಚನವೇದ')ವನ್ನು ಕೊಟ್ಟರು. ಈ ಮೂಲಕ ಶ್ರೀರಾಮಕೃಷ್ಣರು ನಮ್ಮ ಮನೆಗೆ ಬಂದರು. ಅಲ್ಲಿಂದ ನಾವು ಮೂವರು ಶ್ರೀರಾಮಕೃಷ್ಣರ ಶ್ರೀಚರಣಗಳಿಗೆ ಬಂಧಿಸ ಲ್ಪಟ್ಟೆವು.



ನನ್ನ ದೊಡ್ಡ ಅತ್ತಿಗೆ (ನನ್ನ ಪತಿಯ ಅಣ್ಣನ ಹೆಂಡತಿ) ತುಂಬಾ ಭಕ್ತಿಯನ್ನು ಹೊಂದಿದ್ದಳು. ಆಕೆಯ ಸಂಗದಿಂದ ಶೋಕಗ್ರಸ್ತ ರಾಗಿದ್ದ ನನ್ನ ಅತ್ತೆಯವರು ಶ್ರೀಮಾತೆಯವರ ದರ್ಶನ ಪಡೆದು ಒಂದಷ್ಟು ಶಾಂತಿಯನ್ನು ಪಡೆದರು. ಕೆಲವು ದಿನಗಳಲ್ಲಿ ಕೃಪಾ ಮಯಿ ಶ್ರೀಮಾತೆಯವರು ದುಃಖದಿಂದಿದ್ದ ನನ್ನ ಅತ್ತೆ ಹಾಗೂ

ದೊಡ್ಡ ಅತ್ತಿಗೆಗೆ ದೀಕ್ಷೆ ನೀಡಿದರು. ಆಗ ನಾನಿನ್ನೂ ಹುಡುಗಿ; ಮನಸ್ಸಿನಲ್ಲಿ ನನಗೂ ದೀಕ್ಷೆ ಪಡೆಯುವ ಬಯಕೆ ಉಂಟಾಗಿದ್ದರೂ, ಅದನ್ನು ಹೇಳುವಷ್ಟು ಧೈರ್ಯ ನನಗೆ ಉಂಟಾಗಲಿಲ್ಲ.

ನಡುಡುವೆ ನಾನು ಅತ್ತೆಯವರೊಂದಿಗೆ ಶ್ರೀಮಾತೆಯವರ ದರ್ಶನ ಮಾಡಲು ಹೋಗುತ್ತಿದ್ದೆ. ಅವರ ಮಾತುಗಳನ್ನು ಮುಖದ ಮೇಲೆಳೆದುಕೊಂಡ ಸೆರಗಿನಿಂದಲೇ ಕೇಳಿಸಿಕೊಳ್ಳುತ್ತಿದ್ದೆ. ನಮ್ಮ ಮನೆಯಲ್ಲಿ ಆಗ ಅವಗುಂಠನವನ್ನು ತೆರೆಯುವಂತಿರಲಿಲ್ಲ. ಅಲ್ಲದೆ, ಅತ್ತೆಯವರ ಎದುರಿಗೆ ಬೇರೆಯವರೊಂದಿಗೆ ಮಾತನಾಡುವುದೂ ಸಾಧ್ಯವಿರಲಿಲ್ಲ. ಆದ ಕಾರಣ, ಅತ್ತೆಯವರೊಂದಿಗೆ ಶ್ರೀಮಾತೆಯವರ ಸಾನ್ನಿಧ್ಯವನ್ನು ಹೊಂದಿದರೂ ಕೂಡ, ಅವರೊಂದಿಗೆ ಮಾತುಕತೆ ನಡೆಸುವ ಸುಯೋಗ ಸಿಗುತ್ತಿರಲಿಲ್ಲ.

ನನ್ನ ತಂದೆಯವರ ಮನೆ ಹಾಗೂ ಆ ಪ್ರದೇಶದಲ್ಲಿ ಆಗ ಯಾರೊಬ್ಬರಿಗೂ ಶ್ರೀರಾಮಕೃಷ್ಣರಲ್ಲಿ ಭಕ್ತಿ ಉಂಟಾಗಿರಲಿಲ್ಲ. ದಕ್ಷಿಣೇಶ್ವರಕ್ಕೆ ಅಥವಾ ಬೇಲೂರು ಮಠಕ್ಕೆ ಸುತ್ತಾಡಲು ಹೋಗುವುದನ್ನು ಬಿಟ್ಟರೆ ಅಲ್ಲಿ ಬೇರೇನೂ ನಡೆಯುತ್ತಿರಲಿಲ್ಲ. ∩

ನಾನು ಶ್ರೀಮಾತೆಯವರ ದರ್ಶನ ಅಥವಾ ಪಾದಸ್ಪರ್ಶವನ್ನು ಅತ್ತೆಯವರೊಂದಿಗಲ್ಲದೆ ಬೇರೆ ಯಾವಾಗಲೂ ಮಾಡಿಲ್ಲ. ಆದ ಕಾರಣ ಶ್ರೀಮಾತೆಯವರಿಂದ ದೀಕ್ಷೆ ಪಡೆಯುವ ನನ್ನ ಮನಸ್ಸಿನ ಬಯಕೆಯನ್ನು ಹೇಳಿಕೊಳ್ಳುವ ಸುಯೋಗ ಬರಲೇ ಇಲ್ಲ.

ಹೀಗೆಯೇ ಅನೇಕ ದಿನಗಳು ಕಳೆದವು. ನನ್ನ ಮಗಳಿಗೆ ಆಗ ಕೇವಲ ನಾಲ್ಕು ವರ್ಷ ವಯಸ್ಸು; ಒಂದು ದಿನ ಶ್ರೀಮಾತೆಯವರ ಬಳಿಗೆ ಅವಳನ್ನೂ ಕರೆದುಕೊಂಡು ಹೋದೆ. ಶ್ರೀಮಾತೆಯವರ ಪಾದಗಳಲ್ಲಿ ಮಗಳ ತಲೆಯನ್ನು ಮುಟ್ಟಿಸುತ್ತಿದ್ದಂತೆಯೇ, ಶ್ರೀಮಾತೆ ಅವಳನ್ನು ಮಡಿಲಲ್ಲಿರಿಸಿಕೊಂಡು, ಅವಳ ತಲೆಯ ಮೇಲೆ ಕೈಯಾಡಿಸಿ, ನನ್ನ ಮಡಿಲಿಗೆ ಅವಳನ್ನು ತೆಗೆದುಕೊಳ್ಳಲು ಹೇಳಿದರು. ಹೀಗೆ ನಡುನಡುವೆ ಶ್ರೀಮಾತೆಯವರ ದರ್ಶನವನ್ನು ಪಡೆದರೂ, ನನ್ನ ಜೀವದ ಅರಕೆ ತೀರಲಿಲ್ಲ.

ಆಗ ನನ್ನ ಪತಿಯವರಿಗೂ ದೀಕ್ಷೆ ಪಡೆಯುವ ಮನಸ್ಸಿರಲಿಲ್ಲ. ಆದರೆ ನಾನು ದೀಕ್ಷೆ ಪಡೆಯುವುದಕ್ಕೆ ಅವರೇನೂ ಬೇಡವೆನ್ನಲಿಲ್ಲ. ಮನಃಪೂರ್ವಕವಾಗಿ ಅವರು ಹೇಳಿದ್ದರು: ''ನೀನು ಬೇಕಿದ್ದರೆ ಶ್ರೀಮಾತೆಯವರಿಂದ ದೀಕ್ಷೆ ಪಡೆದುಕೋ. ನನಗೆ ಯಾವಾಗ ಅದಕ್ಕೆ ಮನಸ್ಸಾಗುತ್ತದೋ, ಆಗ ತೆಗೆದುಕೊಳ್ಳುತ್ತೇನೆ.'' ಆಗಲೂ ನನಗೆ ತಿಳಿದಿರಲಿಲ್ಲ, ಶ್ರೀರಾಮಕೃಷ್ಣರು ನಮ್ಮನ್ನು ಬಲವಾಗಿ ಹಿಡಿದುಕೊಂಡಿದ್ದಾರೆ, ನಮಗೆ ಬೇರೆಲ್ಲೂ ಹೋಗಲು ದಾರಿಯಿಲ್ಲ ಎಂಬುದಾಗಿ.

ಹೀಗೆ ದಿನಗಳು ಕಳೆಯುತ್ತಿದ್ದವು. ಕೊನೆಗೊಂದು ದಿನ ದಿನ ಇನ್ನು ತಡೆಯಲಾಗದೆ, ನನ್ನ ದೊಡ್ಡ ಅತ್ತಿಗೆಯ ಬಳಿ ನನ್ನ ಮನಸ್ಸಿನ ಬಯಕೆಯನ್ನು ತೋಡಿಕೊಂಡೆ. ಅವರಿಗೂ ಆಗ ಏನನ್ನೂ ಹೇಳಗಾಗಿಲಿಲ್ಲ ; ಆದರೆ, ಖಂಡಿತ ಪ್ರಯತ್ನಪಟ್ಟು ನೋಡೋಣ ಎಂದು ಹೇಳಿ ಭರವಸೆ ಹೊಂದಲು ಅವಕಾಶ ವಿತ್ತಿದ್ದರು.

ಇದೇ ಸಮಯಕ್ಕೆ ನನ್ನ ಪತಿಯ ತಮ್ಮನೊಬ್ಬ, ನನ್ನ ಪತಿಯ ಅಣ್ಣನಂತೆಯೇ ಡಾಕ್ಟರ್ ಆಗಿದ್ದವನು, ಅದೇ ರೀತಿಯಲ್ಲಿ ತನ್ನ ಪತ್ನಿ ಹಾಗೂ ಒಂದು ವರ್ಷದ ಗಂಡು ಮಗುವನ್ನು ತ್ಯಜಿಸಿ, ಇಪ್ಪತ್ತೈದನೇ ವರ್ಷದಲ್ಲಿ ಅಕಾಲಮೃತ್ಯುವಿಗೀಡಾದ. ಈ ಬಾರಿ ನನ್ನ ಅತ್ತೆಯವರು ಭಾರೀ ಅಘಾತಕ್ಕೊಳಗಾದರು. ಆಗ ನನ್ನ ಮಾವನವರು ತೀರಿಕೊಂಡು ಆರೇಳು ವರ್ಷಗಳಾಗಿದ್ದವು. ನನ್ನ ಅತ್ತೆಗೆ ಇನ್ನು ಸಹಿಸುವುದು ಸಾಧ್ಯವಾಗದೆ ಹೋಯಿತು. ಅವರು ಅತ್ಯಂತ ಶೋಕಸಾಗರದಲ್ಲಿ ಮುಳುಗಿಹೋದರು. ಅವರಿಗೆ ಏನೊಂದೂ ತಿಳಿಯದಾಯಿತು.

ನನ್ನ ಅತ್ತೆಯವರಿಗೆ ಸಮಾಧಾನ ಹೇಳಲು ಶರತ್ ಮಹಾರಾಜ್ ಬಂದರು. ನಮ್ಮ ಮನೆಯನ್ನು ಅವರು ತಮ್ಮ ಆಗಮನದಿಂದ ಪವಿತ್ರಗೊಳಿಸಿ, ನಮ್ಮ ಬಳಿಯಲ್ಲೇ ಕುಳಿತು ಎಷ್ಟೊಂದು ಭರವಸೆಯ ಮಾತುಗಳನ್ನಾಡಿದರು! ಶ್ರೀರಾಮಕೃಷ್ಣರನ್ನು ಕುರಿತ ಘಟನೆಗಳನ್ನೂ ಅವರು ವಿವರಿಸಿ ಹೇಳಿದರು. ಇದೇ ಸಮಯದಲ್ಲಿ ಗೌರಿ-ಮಾ ಕೂಡ ಒಂದು ದಿನ ನಮ್ಮ ಮನೆಗೆ ಬಂದಿದ್ದರು. ಅವರು ಶ್ರೀರಾಮಕೃಷ್ಣರ ಹಲವು ಪುಣ್ಯಕಥೆಗಳನ್ನು ಹೇಳಿ ನಮ್ಮನ್ನು ಧನ್ಯರಾಗಿಸಿದರು. ಆಗ ಗೋಯಾ ಬಾಗಾನ್‌ನಲ್ಲಿ ಅವರ ಶಾಲೆ ಹೊಸದಾಗಿ ಆರಂಭವಾಗಿತ್ತು. ಅಲ್ಲಿ ನನ್ನ ಇಬ್ಬರು ತಂಗಿಯರು ಓದುತ್ತಿದ್ದರು. ಈ ಕಾರಣದಿಂದ ಅವರು ನನ್ನ ತಂದೆಯ ಮನೆಗೂ ಹೋಗುತ್ತಿದ್ದರು. ನಡುನಡುವೆ ಅಲ್ಲೂ ಅವರು ಶ್ರೀರಾಮಕೃಷ್ಣರನ್ನು ಕುರಿತ ಪುಣ್ಯಕಥೆಗಳನ್ನು ಆನಂದದಿಂದ ಹೇಳುತ್ತಿದ್ದರು. ಆ ದಿನಗಳ ನೆನಪು ಬಂದಾಗಲೆಲ್ಲ ಈಗ ನನಗನ್ನಿಸುತ್ತದೆ, ನಾವು ಅದೆಂಥ ಸೌಭಾಗ್ಯಕ್ಕೆ ಪಾತ್ರರಾಗಿದ್ದೆವು!

ಅದಾದ ನಂತರ ನನ್ನ ಮನದ ಬಯಕೆ ಇನ್ನಷ್ಟು ತೀವ್ರಗೊಂಡಿತು. ನನ್ನ ವ್ಯಾಕುಲತೆಯಿಂದ ಈ ಬಾರಿ ಶ್ರೀರಾಮಕೃಷ್ಣರ ಆಸನ ಅಲುಗಾಡಿತು ಎಂದು ನನಗೆ ಅನ್ನಿಸಿತು. ಶ್ರೀರಾಮಕೃಷ್ಣರು ಒಂದು ಸುಯೋಗವನ್ನು ಕಲ್ಪಸಿದರು: ಭಕ್ತಶ್ರೇಷ್ಠನಾದ ಕಿರಣಚಂದ್ರ ದತ್ತರ ಹಿರಿಯ ಮಗಳಾದ ಶಿವರಾಣಿ ನನ್ನ ಇನ್ನೊಬ್ಬ ಭಾವಮೈದುನನ ಮಡದಿಯಾಗಿ ಬಂದಳು. ಕೆಲವು ದಿನಗಳ ಮಟ್ಟಿಗೆ ಅವಳು ನನ್ನ ಮನೆಗೆ ಬಂದಿದ್ದಳು. ಅವಳು ಆನಂದವೇ ಮೂರ್ತಿವೆತ್ತಂತಿದ್ದಳು! ಅವಳು ನನ್ನನ್ನಂತೂ

---

∩ ಮುಂದೆ ನನ್ನ ತಾಯಿಯವರು ರಾಮಕೃಷ್ಣರ ಕಾರ್ಯಕ್ಕಾಗಿ ಉದಾರವಾಗಿ ಧನಸಹಾಯ ಮಾಡಿದರು. ಅವರ ತಾಯಿ-ತಂದೆಯವರ ನೆನಪಿಗಾಗಿ, ಕಾಶಿ ರಾಮಕೃಷ್ಣ ಮಿಷನ್ ಸೇವಾಶ್ರಮದಲ್ಲಿ ಸಾಂಕ್ರಾಮಿಕ ರೋಗಿಗಳ ವಾರ್ಡನ್ನು ಅವರೇ ನಿರ್ಮಿಸಿದರು.

ತುಂಬಾ ಪ್ರೀತಿಸುತ್ತಿದ್ದಳು. ನನ್ನ ಭಾವಮೈದುನ ಆಗ್ರಾದಲ್ಲಿ ಒಂದು ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದ. ಅವನು ಮದುವೆ ಯಾದಾಗ ಈಕೆ ಇನ್ನೂ ಚಿಕ್ಕ ಹುಡುಗಿ. ಮೂರು–ನಾಲ್ಕು ವರ್ಷಗಳವರೆಗೆ ಅವಳನ್ನು ಆಗ್ರಾಗೆ ಕರೆದುಕೊಂಡು ಹೋಗು ವುದು ಸಾಧ್ಯವಾಗಲಿಲ್ಲ. ಅವಳು ತುಸು ದೊಡ್ಡವಳಾದಾಗ, ಅವಳನ್ನು ಆಗ್ರಾಗೆ ಕರೆದುಕೊಂಡು ಹೋಗುವ ಮಾತು ಬಂತು. ಆಗ ಅವಳು ಶ್ರೀಮಾತೆಯವರಿಂದ ದೀಕ್ಷೆ ಪಡೆಯುವ ಆಸೆ ಯನ್ನು ವ್ಯಕ್ತಪಡಿಸಿದಳು. ಕಿರಣ ಬಾಬುಗಳ ಮನೆಗೆ ಸ್ವಾಮಿ ಬ್ರಹ್ಮಾನಂದರೇ ಮೊದಲಾದ ಸ್ವಾಮೀಜಿಗಳು ಯಾವಾಗಲೂ ಬಂದು ಹೋಗಿ ಮಾಡುತ್ತಿದ್ದರು; ಶ್ರೀಮಾತೆಯವರು ಕೂಡ, ಅವರ ಕಾಶಿಯಲ್ಲಿದ್ದ ಮನೆ 'ಲಕ್ಷ್ಮೀನಿವಾಸ'ವನ್ನು ಪವಿತ್ರ ಗೊಳಿಸಿ, ಅಲ್ಲಿ ಕೆಲವು ದಿನ ವಾಸವಾಗಿದ್ದು, ಅವರನ್ನು ಧನ್ಯ ರನ್ನಾಗಿಸಿದರು. ಅವರಿಗೆ ಯಾವಾಗಲೂ ಶ್ರೀಮಾತೆಯವರ ದರ್ಶನ, ಪಾದಸ್ಪರ್ಶ ಇವುಗಳು ಲಭ್ಯವಾಗುತ್ತಿದ್ದವು. ಈ ಬಾರಿ ನನಗೆ ಶ್ರೀಮಾತೆಯವರು ಸುಯೋಗವನ್ನು ಕಲ್ಪಿಸಿಕೊಟ್ಟರು. ಶಿವರಾಣಿಯೊಂದಿಗೆ ನನಗೂ ಅದೃಷ್ಟ ಬಂದೊದಗಿತು. ನನ್ನ ಅತ್ತೆಯವರು ನನಗೆ ಅನುಮತಿ ಕೊಟ್ಟರು. ನಾನು ದೀಕ್ಷೆ ಪಡೆ ಯುವ ದಿನವನ್ನೂ ಗೊತ್ತುಮಾಡಲಾಯಿತು.

ಆದರೆ ಇನ್ನೊಂದು ವಿಘ್ನವುಂಟಾಯಿತು. ಆಗ ರಾಧುವಿನ ಆರೋಗ್ಯ ತುಂಬಾ ಕೆಟ್ಟುಹೋಗಿದ್ದು, ಆಕೆಗೆ ಯಾವುದೇ ಸದ್ದನ್ನು ಸಹಿಸಲಾಗುತ್ತಿರಲಿಲ್ಲ. ಆದ ಕಾರಣ ಶ್ರೀಮಾತೆಯವರು ಅವ ಳೊಂದಿಗೆ 'ಉದ್ಬೋಧನ'ದಿಂದ ಹೊರಟು, ಬೋಸ್‌ಪಾರಾ ಲೇನ್‌ನಲ್ಲಿದ್ದ ನಿವೇದಿತಾ ವಿದ್ಯಾಲಯದ ಬೋರ್ಡಿಂಗ್‌ನಲ್ಲಿ ತಂಗಿದ್ದರು. ಹೀಗಾಗಿ ಶ್ರೀಮಾತೆಯವರು ನಮಗೆ ದೀಕ್ಷೆ ನೀಡಲು ಸಮ್ಮತಿ ನೀಡುವರೇ ಇಲ್ಲವೇ ಎಂಬ ಚಿಂತೆ ನಮಗುಂಟಾಗಿತ್ತು.

ಆದರೆ ಶಿವರಾಣಿ ಆಗ್ರಾಗೆ ಹೋಗುವ ದಿನ ಮತ್ತೆ ಮತ್ತೆ ಬದ ಲಾದ ಕಾರಣ, ನಮ್ಮ ಮನೆಯಲ್ಲಿ ಒಂದಿಷ್ಟು ಗದ್ದಲವುಂಟಾ ಗಿತ್ತು. ಕರುಣಾಮಯಿ ಶ್ರೀಮಾತೆಯವರು ಇದೆಲ್ಲವನ್ನೂ ಕೇಳಿಸಿ ಕೊಂಡು, ದೀಕ್ಷೆಗೆ ಸಮ್ಮತಿ ನೀಡಿದರು. ಅವರ ಮಾತನ್ನು ಕೇಳಿ ಆನಂದದಿಂದ, ಅದೇನೋ ಹೇಳಲಾಗದ ಭಾವನೆಯುಂಟಾಗಿ, ನನಗೆ ಅಂದು ರಾತ್ರಿಯಿಡೀ ನಿದ್ದೆ ಬರಲಿಲ್ಲ. ರಾತ್ರಿ ಕಳೆದು ಬೆಳ ಗಾದ ನಂತರ ಸ್ನಾನ, ಮನೆದೇವತೆಯ ಪೂಜೆ ಇತ್ಯಾದಿಗಳನ್ನು ಮುಗಿಸಿಕೊಂಡು, ಕಂಪಿಸುತ್ತಿರುವ ಹೃದಯದೊಂದಿಗೆ ನಾನು ಅತ್ತೆಯವರೊಂದಿಗೆ ಬೋಸ್‌ಪಾರಾ ಲೇನ್‌ಗೆ ಹೋದೆ. ಎಂದಿ ನಂತೆ ನಾನು ಅವಗುಂಠನ ಧರಿಸಿಕೊಂಡಿದ್ದೆ. ರಾಧುವಿನ ಬಗೆಗೆ ಒಂದೆರಡು ಮಾತುಕತೆ ಆಡುವುದಕ್ಕೂ ಅವಕಾಶವಿರಲಿಲ್ಲ.

ಏನೇ ಇರಲಿ, ಆ ಶುಭಮೂಹೂರ್ತ ಬಂದೇಬಿಟ್ಟಿತು. ಶ್ರೀಮಾತೆಯವರು ನಮ್ಮನ್ನು ಒಬ್ಬೊಬ್ಬರಾಗಿ ಕರೆದರು. ಅದೇ ಜೀವನದ ಶುಭಮೂಹೂರ್ತ — ಶ್ರೀಮಾತೆ ಮತ್ತು ನಾನು ಒಂದೇ ಕೋಣೆಯಲ್ಲಿದ್ದೇವೆ; ಅಲ್ಲಿ ಬೇರೆ ಯಾರೂ ಇರಲಿಲ್ಲ. ನನ್ನ ಜೀವನದಲ್ಲಿ ನಾನು ಎಂದಿಗೂ ನನ್ನ ತಾಯಿಯವರನ್ನು ಸಂಬೋಧಿಸಿ ಒಂದು ಮಾತನ್ನೂ ಹೇಳಿದ್ದಿಲ್ಲ; ಈಗ ಈ ಶುಭ ಮುಹೂರ್ತದಲ್ಲಿ ಎಷ್ಟೇ ಅಲೌಕಿಕವಾಗಿರಲಿ, ಈ ಅವಕಾಶವನ್ನು ಕಳೆದುಕೊಂಡರೆ, ಅದನ್ನು ಮತ್ತೆಂದಿಗೂ ನಾನು ಪಡೆಯಲಾರೆ. ನನ್ನ ಅಂತರಂಗ ಹೇಳಿತು: 'ಅಯ್ಯೋ ಮೂರ್ಖಳೇ! ಇದೇ ನಿನ್ನ ಸಮಯ, ಇದೇ ನಿನಗೆ ಸಿಕ್ಕಿದ ಅವಕಾಶ. ಕರಣಾಮಯಿ ಮಾತೆ ಯವರ ಬಳಿ ಏನನ್ನು ಕೇಳಬೇಕೆಂದಿದ್ದೀಯೋ ಕೇಳಿಕೋ. ಇನ್ನೆಂ ದಿಗೂ ಇಂಥ ಸುಯೋಗ ನಿನಗೆ ಸಿಗಲಾರದು.'

ರಾಧುವಿನ ಅನಾರೋಗ್ಯದ ಬಗ್ಗೆ ಶ್ರೀಮಾತೆಯವರು ಸಂಕ್ಷಿಪ್ತ ವಾಗಿ ಹೇಳಿ ಮುಗಿಸಿದರು. ಬಳಿಕ ನಿವೇದಿತಾ ವಿದ್ಯಾಲಯದ ಬೋರ್ಡಿಂಗ್‌ನಲ್ಲಿದ್ದ ದೇವರಕೋಣೆಗೆ ನಮ್ಮನ್ನು ಒಬ್ಬೊಬ್ಬರಾಗಿ ಕರೆದುಕೊಂಡು ಹೋಗಿ ಪ್ರವೇಶ ಮಾಡಿಸಿದರು. ಅಲ್ಲಿ ಶ್ರೀರಾಮ ಕೃಷ್ಣರ ಹಾಗೂ ನಾನಾ ದೇವತೆಗಳ ಚಿತ್ರಪಟಗಳಿದ್ದವು. ಶ್ರೀಮಾತೆ ಯವರು ನಮ್ಮ ಇಷ್ಟಮೂರ್ತಿ ದೇವಿಯನ್ನು ತೋರಿಸಿಕೊಟ್ಟು, ಬಳಿಕ ಶ್ರೀರಾಮಕೃಷ್ಣರನ್ನು ತೋರಿಸುತ್ತ, ''ಎಲ್ಲವೂ ಅವರೇ ಆಗಿದ್ದಾರೆ'' ಎಂದರು. ಬಳಿಕ ಬೀಜಸಮೇತವಾದ ಮಹಾ ಮಂತ್ರವನ್ನು ಉಪದೇಶಿಸಿದರು. ಅನಂತರ ಹೇಳಿದರು: ''ಅಮ್ಮಾ, ದೇವರಿಗೆ ನೈವೇದ್ಯ ಮಾಡದೆ ಯಾವುದೇ ಪದಾರ್ಥವನ್ನು ಎಂದಿಗೂ ತಿನ್ನಬೇಡ. ಒಂದು ಸುರುಳಿ ತಾಂಬೂಲವನ್ನಾದರೂ ಸರಿ, ದೇವರಿಗೆ ಅರ್ಪಿಸಿ ತಿನ್ನು. ಹಾಗೆಯೇ ಶ್ರಾದ್ಧದ ಅನ್ನವನ್ನು ಎಂದಿಗೂ ತಿನ್ನಬೇಡ.'' ವಿಶೇಷವಾಗಿ ಯಾವುದೇ ವಿಧಿ, ನಿಷೇಧ ಗಳನ್ನು ಅವರು ನಮಗೆ ಹೇಳಲಿಲ್ಲ; ಇಷ್ಟನ್ನು ಮಾತ್ರ ಶ್ರೀಮಾತೆ ಯವರು ಸ್ವತಃ ತಾವೇ ನಿಷ್ಠೆಯಿಂದ ಪಾಲಿಸುತ್ತಿದ್ದರು.

ಕರುಣಾಮಯಿ ಶ್ರೀಮಾತೆಯವರು ನನಗೆ ಈ ರೀತಿ ದೀಕ್ಷಾ ದಾನ ಮಾಡಿ ಆಶ್ರಯ ನೀಡಿದಾಗ, ಆ ಕೂಡಲೇ ನಾನು ಅವರ ಎರಡೂ ಪಾದಕಮಲಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಕಾತರ ಭಾವದಿಂದ ಹೇಳತೊಡಗಿದೆ: ''ಅಮ್ಮಾ! ಅಮ್ಮಾ! ನಿಮ್ಮ ಶ್ರೀ ಚರಣಗಳಲ್ಲಿ ನನಗೆ ಆಶ್ರಯ ಕೊಟ್ಟಿರಿ ತಾನೆ?'' ಅವರು ನನ್ನ ತಲೆಯ ಮೇಲೆ ಕೈಯಾಡಿಸುತ್ತ, ಕಣ್ಣುಗಳನ್ನು ಒರಸುತ್ತ ಹೇಳತೊಡಗಿದರು, '' ಹೌದಮ್ಮಾ, ಕೊಟ್ಟೆನಲ್ಲವೆ?'' ನನಗೆ ಆಗ ಏನನ್ನೂ ಆಲೋಚಿಸಲಾಗಲಿಲ್ಲ. ಈಗಲೂ ನಾನು ಅದನ್ನು ನೆನಪಿಸಿಕೊಂಡಾಗ, ಶ್ರೀಮಾತೆಯವರ ಅದೇ ಕೋಮಲವಾದ ಪಾದಪದ್ಮಗಳು ನನ್ನ ಹೃದಯವನ್ನು ಸ್ಪರ್ಶಿಸಿದಂತೆ ಅನುಭವ ವಾಗುತ್ತಿದೆ. ಅವರ ಪಾದದ ಬೆರಳುಗಳಲ್ಲಿ ಒಂದು ಲೋಹದ ತಂತಿಯಿಂದ ಮಾಡಿದ ಒಂದು ಉಂಗುರುವಿತ್ತು — ಬಹುಶಃ ಅದು ವಾತದ ಕಾರಣದಿಂದಾಗಿ ಧರಿಸಿದ್ದಿರಬೇಕು; ಈಗಲೂ ನಾನು ಅದನ್ನು ಸ್ಪರ್ಶಿಸಿದಂತೆ ಅನುಭವವಾಗುತ್ತದೆ. ಬಳಿಕ ನಾನು ಉನ್ಮಾದಕ್ಕೊಳಗಾದವಳಂತೆ ಹೊರಬಂದೆ. ಶ್ರೀಮಾತೆ ಯವರು ನಮಗೆ ಪ್ರಸಾದ ಕೊಟ್ಟು, ತುಸು ದುಃಖಿತರಾಗಿ ಹೇಳಿದರು, ''ಇಂದು ನೀವು ಇಲ್ಲಿ ಪ್ರಸಾದ (ಭೋಜನ)

ಮಾಡಬೇಕಿತ್ತು. ಏನು ಮಾಡಲಮ್ಮಾ, ರಾಧುವಿಗೆ ಗದ್ದಲವನ್ನು ಸಹಿಸಲಾಗುತ್ತಿಲ್ಲವಲ್ಲ!'' ಆ ಸಮಯದಲ್ಲೇ ನಮಗೆ ಹಿಂದಿರುಗಿ ಬರಲು ವ್ಯವಸ್ಥೆ ಮಾಡಲಾಗಿತ್ತು. ಯಾವಾಗ, ಯಾವ ರೀತಿಯಲ್ಲಿ ಗಾಡಿಯನ್ನೇರಿ ಕುಳಿತೆನೋ ನನಗೆ ತಿಳಿಯಲಿಲ್ಲ. ಒಂದು ವಾರದ ತನಕವೂ ನನಗೆ ಇಂತಹ ಭಾವೋನ್ಮಾದವಿತ್ತು.

ನನ್ನ ಜೀವನದಲ್ಲಿ ಶ್ರೀಮಾತೆಯವರೊಂದಿಗೆ ನಡೆಸಿದ ಮೊದಲ ಹಾಗೂ ಕೊನೆಯ ಮಾತುಕತೆ ಇದಾಗಿತ್ತು. ಇದರ ನಂತರ ನನಗೆ ಶ್ರೀಮಾತೆಯವರ ದರ್ಶನ ಮಾಡಲು ಸಾಧ್ಯವಾಗಲಿಲ್ಲ. ಅತ್ಯಂತ ತುಚ್ಛವಾದ ಸಾಂಸಾರಿಕ ತಾಪತ್ರಯಗಳಿಂದಾಗಿ ನನಗೆ ಶ್ರೀಮಾತೆಯವರ ಶ್ರೀಚರಣಗಳ ದರ್ಶನ ಪಡೆಯಲು ವಿಘ್ನವುಂಟಾಗಿತ್ತು.

ಶಿವರಾಣಿ ಆಗ್ರಾಗೆ ಹೋದ ಎರಡು-ಮೂರು ತಿಂಗಳಲ್ಲಿಯೇ ಅವಳು ಶ್ರೀರಾಮಕೃಷ್ಣರಲ್ಲಿ ಒಂದಾದಳು. ಇನ್ನೂ ಎಳೆಯ ಸೊಸೆ ಎಂಬ ಕಾರಣದಿಂದ ನನ್ನ ಅತ್ತೆಯವರು ಅವಳೊಂದಿಗೆ ಆಗ್ರಾಗೆ ಹೋಗಿದ್ದರು. ಅಲ್ಲಿಂದಲೇ ಅವರು ಕೇಳಿದ್ದರು, ಶಿವರಾಣಿ ಅಗಲಿ ಹೋಗಿದ್ದುದರಿಂದ ದುಃಖಿತರಾದ ಶ್ರೀಮಾತೆಯವರು ಕಣ್ಣೀರು ಸುರಿಸುತ್ತ ಹೇಳಿದ್ದರಂತೆ: ''ರಾಣಿಯ ಅತ್ತೆ ಅಷ್ಟು ವಯಸ್ಸಾದ ಹಿರಿಯ ಗೃಹಿಣಿಯಾಗಿದ್ದರೂ ಕೂಡ ಅಂತಃಸ್ಸತ್ವವಿರುವ ಸೊಸೆಯನ್ನು ತಾಜ್‌ಮಹಲಿನ ಗುಂಬಜಿನತ್ತ ಏಕೆ ಕಳುಹಿಸಿಕೊಟ್ಟಳು? ಅದೂ ಅಲ್ಲದೆ, ಗುರುವಾರವೇ ಆಗ್ರಾಗೆ ಕಳುಹಿಸಿಕೊಟ್ಟಿದ್ದೇಕೆ?''

ನನ್ನ ಅತ್ತೆಯವರು ತುಂಬ ಮೃದುಸ್ವಭಾವದವರಾಗಿದ್ದರು. ಶ್ರೀಮಾತೆಯವರು ಅಸಮಾಧಾನಗೊಂಡಿದ್ದಾರೆ ಎಂಬುದನ್ನು ಕೇಳಿ, ಕಲ್ಕತ್ತೆಗೆ ಬಂದು ತುಂಬಾ ಭಯಗೊಂಡು, 'ಉದ್ಬೋಧನ'ಕ್ಕೆ ಹೋಗಲು ಬಹಳ ಸಂಕೋಚಪಟ್ಟುಕೊಂಡರು. ಕೆಲಸದ ನಡುವೆ ನನಗೂ ಅಲ್ಲಿಗೆ ಹೋಗಲಾಗಲಿಲ್ಲ. ಶ್ರೀಮಾತೆಯವರು ತಮ್ಮ ಐಹಿಕ ಲೀಲೆಯನ್ನು ಮುಗಿಸುವ ಮುನ್ನ ಅತ್ತೆಯವರಿಗೆ ಅಲ್ಲಿಗೆ ಹೋಗಲಾಗಲಿಲ್ಲ; ನನಗೂ ಅವರ ಪಾದಪದ್ಮಗಳ ದರ್ಶನ ಪಡೆಲಾಗಲಿಲ್ಲ.

*(ಮುಂದಿನ ಸಂಚಿಕೆಗೆ)*

## ಶ್ರೀಮಾತೆಯವರ ಉಪದೇಶಗಳು



❋ **ಶಿಷ್ಯ :** ಜಪ ಮಾಡುವ ಮೊದಲು ಆಚಮನ ಮಾಡುವುದು ಒಳ್ಳೆಯದೆ ?

**ಶ್ರೀಮಾತೆ :** ಹೌದು, ಮನೆಯಲ್ಲಿ ಆಸನದ ಮೇಲೆ ಕುಳಿತು ಜಪ ಮಾಡುವಾಗ ಆಚಮನ ಮಾಡುವುದರಿಂದ ಪ್ರಯೋಜನವಿದೆ. ರಸ್ತೆಯಲ್ಲಿ ಅಥವಾ ಬೇರೆಲ್ಲಾದರೂ ನಡೆಯುವಾಗ ನಾಮ ಜಪ ಮಾಡಿದರೂ ಸಾಕು.

**ಶಿಷ್ಯ :** ಬರೀ ನಾಮಜಪವೆ ? ಮಂತ್ರಜಪ ಮಾಡಬೇಡವೆ ?

**ಶ್ರೀಮಾತೆ :** ಹೌದು, ಮಂತ್ರಜಪವನ್ನೂ ಮಾಡಬೇಕು. ಆದರೆ ಮನಸ್ಸನ್ನು ಸ್ಥಿರಗೊಳಿಸಿ ಒಂದು ಸಲ ಭಗವಂತನನ್ನು ಕರೆದರೂ, ಲಕ್ಷ ಜಪ ಮಾಡಿದ ಫಲ ಲಭಿಸೀತು. ಇಡೀ ದಿನ ಜಪ ಮಾಡಿದರೂ ಮನಸ್ಸು ಅಲ್ಲಿಲ್ಲ ; ಅದರಿಂದ ಫಲವೇನು? ಮನಸ್ಸನ್ನಿಡಬೇಕು, ಹಾಗಿದ್ದರೆ ಮಾತ್ರ ಭಗವಂತನ ಕೃಪೆ ಲಭಿಸೀತು.

**ಶಿಷ್ಯ :** ನಾನೇನು ಮಾಡುತ್ತಿದ್ದೇನೋ ಅಷ್ಟೇ ಸಾಕೆ, ಅಥವಾ ಇನ್ನೂ ಏನಾದರೂ ಮಾಡಬೇಕೆ ?

**ಶ್ರೀಮಾತೆ :** ನೀನು ಈಗೇನು ಮಾಡುತ್ತಿದ್ದೀಯೋ ಅದನ್ನೇ ಮುಂದುವರಿಸು. ನೀನು ಈಗಾಗಲೇ ಭಗವಂತನ ಕೃಪೆಗೆ ಪಾತ್ರನಾಗಿದ್ದೀಯಾ.

**ಶಿಷ್ಯ :** ಎರಡು ಮೂರು ದಿನ ಸರಳಭಾವದಿಂದ ಭಗವಂತನನ್ನು ಪ್ರಾರ್ಥಿಸಿದರೆ ಅವನ ದರ್ಶನ ಸಿಗಬಹುದು ಎನ್ನುತ್ತಾರೆ. ನಾನು ಇಷ್ಟು ದಿನಗಳಿಂದ ಕರೆಯುತ್ತಲೇ ಇದ್ದೇನೆ, ಆದರೆ ನನಗೆ ಅವನ ದರ್ಶನವಾಗುತ್ತಿಲ್ಲ, ಏಕೆ ?

**ಶ್ರೀಮಾತೆ :** ಹೌದು, ನಿನಗೆ ಅದು ಸಿಗುವುದು. ಶಿವವಾಕ್ಯ ಹಾಗೂ ಶ್ರೀರಾಮಕೃಷ್ಣರ ಬಾಯಿಯಿಂದ ಹೊರಬಂದ ಮಾತುಗಳು ಸುಳ್ಳಾಗಲಾರವು. ಸುರೇಂದ್ರ (ಮಿತ್ರ)ನಿಗೆ ಅವರು ಹೇಳಿದ್ದರು, 'ಜಾರ್ ಆಛೆ ಶೇ ಮಾಪೋ; ಜಾರ್ ನಯಿ ಶೇ ಜಪೋ' (ಯಾರಲ್ಲಿ ಸಂಪತ್ತು ಇದೆಯೋ ಅವರು ದಾನ ಮಾಡಬೇಕು; ಯಾರಲ್ಲಿ ಇಲ್ಲವೋ ಅವರು ಜಪ ಮಾಡಬೇಕು) ಅಂತ. ಅದು ಸಾಧ್ಯವಿಲ್ಲದಿದ್ದರೆ (ಶ್ರೀರಾಮಕೃಷ್ಣರನ್ನು ತೋರಿಸಿ) ಅವರಲ್ಲಿ ಶರಣಾಗತರಾಗಿ. ಇದನ್ನು ನೆನಪಿನಲ್ಲಿಟ್ಟುಕೊಂಡರೂ ಸಾಕು – 'ನನ್ನನ್ನು ನೋಡಿಕೊಳ್ಳುವವರು ಒಬ್ಬರಿದ್ದಾರೆ ; ಒಬ್ಬ ತಂದೆ ಅಥವಾ ತಾಯಿ ಇದ್ದಾರೆ' ಅಂತ.

❋ **ಶಿಷ್ಯೆ :** ಅಮ್ಮಾ ದೇವರೆಲ್ಲಿದ್ದಾನೆ?

**ಶ್ರೀಮಾತೆ :** ಅಮ್ಮಾ, ದೇವರು ಇನ್ನೆಲ್ಲಿರುತ್ತಾನೆ? ಅವನು ಭಕ್ತರ ಸಮೀಪದಲ್ಲಿರುತ್ತಾನೆ. ಎಲ್ಲಿ ಸಾಧುಗಳು ಶೌಚಾದಿ ಮಾಡುತ್ತಾರೋ, ಸಂಸಾರಿಗಳು ಅಲ್ಲಿಗೆ ಹೋದರೂ, ಅಲ್ಲಿನ ಗಾಳಿ ಸೋಂಕಿ ಅವರ ಮನಸ್ಸಿನ ಮಾಲಿನ್ಯ ಕಳೆದು ಹೋಗುವುದು.

*('ಶ್ರೀಶಾರದಾದೇವಿ ವಚನವೇದ', ಪು.೩೫೪-೮೨)*